# ಕರ್ನಾಟಕ ಸರ್ಕಾರದ ನಡವಳಿಗಳು

*ವಿಷಯ:-* ಆದೇಶ ಸಂಖ್ಯೆ: ಗ್ರಾಅಪ 205 ಸೇಶಿಕಾ 2014(1) ದಿನಾಂಕ:15.3.2017 ಕ್ಕೆ ಅರ್ಹ ನೌಕರರ ಪ್ರಕರಣಗಳನ್ನು ಸೇರ್ಪಡೆ ಮಾಡುವ ಬಗ್ಗೆ ಆದೇಶ.

*ಓದಲಾಗಿದೆ*

1. *ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 205 ಸೇಶಿಕಾ 2014 (1) ದಿನಾಂಕ:15.3.2017.*
2. *ಸರ್ಕಾರದ ಆದೇಶ ಸಂಖ್ಯೆ:* ಗ್ರಾಅಪ 312 ಜಿಪಅ 17, ದಿನಾಂಕ:24.10.2017.
3. *ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 230 ಜಿಪಅ 2017, ದಿನಾಂಕ:31.10.2017*
4. ಮುಕಾಅ, ಜಿಪಂ, ಬೆಂಗಳೂರು ಗ್ರಾಮಾಂತರ ಇವರ ಪತ್ರ ಸಂಖ್ಯೆ: ಬೆಂಗ್ರಾಜಿಪಂ/ಸಿ.3/ಸಿಆರ್.25/2018-19, ದಿ:01.8.2018.
5. *ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ಇವರ ಪತ್ರ ಸಂಖ್ಯೆ:ತುಜಿಪಂ:ಆಡಳಿತ (1) ವಿವ:81/15-16, ದಿನಾಂಕ:16.10.2018*

**ಪ್ರಸ್ತಾವನೆ**

ಸರ್ಕಾರದ ಇತರೆ ಇಲಾಖೆಗಳಲ್ಲಿ ದಿನಗೂಲಿ ಆದಾರದ ಮೇಲೆ ನೇಮಕ ಹೊಂದಿ ನಂತರ ಜಿಲ್ಲಾ ಪಂಚಾಯತ್‌ಗಳಲ್ಲಿ ದಿನಾಂಕ:1.4.2006ರ ಪೂರ್ವದಲ್ಲಿ ಸಕ್ರಮಗೊಂಡು ಕಾರ್ಯನಿರ್ವಹಿಸುತ್ತಿರುವ/ ನಿವೃತ್ತಿ ಹೊಂದಿರುವ 459 ಸಂಖ್ಯೆಯ ನೌಕರರುಗಳಿಗೆ ಪಿಂಚಣಿ, ಮರಣ ಹಾಗೂ ನಿವೃತ್ತಿ ಉಪದಾನ ಪಡೆಯಲು ಅನುವಾಗುವಂತೆ ಅವರುಗಳನ್ನು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:15.3.2017ರ ಆದೇಶದಲ್ಲಿ ಸರ್ಕಾರಿ ನೌಕರರೆಂದು ಪರಿಗಣಿಸಿ, ಆದೇಶ ಹೊರಡಿಸಲಾಗಿದೆ. ನಂತರದ ಪರಿಶೀಲನೆಯಲ್ಲಿ ಅರ್ಹರೆಂದು ಕಂಡು ಬಂದ ಶ್ರೀ ದ್ಯಾಮಪ್ಪ, ನಿವೃತ್ತ ಡಿ-ಗ್ರೂಫ್ ನೌಕರ, ಜಿಲ್ಲಾ ಪಂಚಾಯತ್, ಕೊಪ್ಪಳ ಮತ್ತು ಕೊಡಗು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಆರು ನೌಕರರ ವಿವರಗಳನ್ನು ಮೇಲೆ ಓದಲಾದ ಕ್ರಮಾಂಕ (2) &(3) ರ ಆದೇಶಗಳಲ್ಲಿ ಮೇಲೆ ಓದಲಾದ ಕ್ರಮಾಂಕ (1) ರ ಆದೇಶಕ್ಕೆ ಸೇರ್ಪಡೆ ಮಾಡಲಾಗಿದೆ.

ಮೇಲೆ ಓದಲಾದ ಕ್ರಮಾಂಕ (4) & (5) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ಇವರ ಶ್ರೀ ರಾಮಕೃಷ್ಣಯ್ಯ, ದ್ವಿ.ದ.ಸ ಮತ್ತು ಶ್ರೀ ಎಂ.ಆರ್.ಪ್ರಕಾಶ್, ದ್ವಿ.ದ.ಸ ಇವರಿಗೆ ನಿವೃತ್ತಿ ವೇತನ ಇನ್ನಿತರ ಸೌಲಭ್ಯಗಳನ್ನು ಕಲ್ಪಿಸುವ ಸಂಬಂಧ ಪ್ರಸ್ತಾವನೆಯನ್ನು ಮುಂದಿನ ಕ್ರಮಕ್ಕಾಗಿ ಕಳುಹಿಸಿರುತ್ತಾರೆ.

ಸರ್ಕಾರವು ಇವರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಹಾಗೂ *ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು* ಪ್ರಸ್ತಾವನೆಯನ್ನು ಪರಿಶೀಲಿಸಿರುತ್ತದೆ. ಸದರಿ ಜಿಲ್ಲಾ ಪಂಚಾಯತ್‌ಗಳು ನೀಡಿರುವ ಮಾಹಿತಿಯನುಸಾರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ರವರು ಶ್ರೀ ಎಂ.ಆರ್.ಪ್ರಕಾಶ್,

---2

ಇವರನ್ನು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 10 ಜಿಪಅ 2006, ದಿನಾಂಕ:17.2.2006 ರ ಆದೇಶದಂತೆ ಅಧಿಕೃತ ಜ್ಞಾಪನ ಸಂಖ್ಯೆ: ತುಜಿಪ.ಅಭಿ(2)ಹೈರಿಪಿ-22/02-03, ದಿನಾಂಕ:18.4.2007 ರಲ್ಲಿ ದಿನಾಂಕ:1.9.1999 ರಿಂದ ಅನ್ವಯವಾಗುವಂತೆ ಸೇವಾ ಸಕ್ರಮಗೊಳಿಸಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಇವರು ಶ್ರೀ ರಾಮಕೃಷ್ಣಯ್ಯ, ದ್ವಿತೀಯ ದರ್ಜೆ ಸಹಾಯಕರು ಇವರನ್ನು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಅ 2001, ದಿನಾಂಕ:19.7.2002 ರ ಆದೇಶಾನುಸಾರ ಸೂಪರನ್ಯೂಮರರಿ ಹುದ್ದೆಯಲ್ಲಿ ಸಕ್ರಮಗೊಳಿಸಿದ್ದು, ಸದರಿಯವರನ್ನು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಜ್ಞಾಪನ ಪತ್ರ ಸಂಖ್ಯೆ: ಮುಇಂ:ಗ್ರಾಇಂಇ:ಸಿ-14/2004-05/1133, ದಿನಾಂಕ:31.5.2004 ರಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ದೊಡ್ಡಬಳ್ಳಾಪುರ ಕಛೇರಿಯಲ್ಲಿ ಖಾಲಿ ಇದ್ದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಮರುವಿನ್ಯಾಸಗೊಳಿಸಿರುತ್ತಾರೆ.

ಪ್ರಸ್ತುತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಹಾಗೂ *ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು* ಸಲ್ಲಿಸಿರುವ ಮಾಹಿತಿ ಹಾಗೂ ಲಭ್ಯಪಡಿಸಿರುವ ದಾಖಲೆಗಳನುಸಾರ ಮೇಲೆ ತಿಳಿಸಿರುವ ಇಬ್ಬರು ನೌಕರರು ದಿನಾಂಕ:1.4.2006 ಕ್ಕೂ ಪೂರ್ವದಲ್ಲಿ ಸೇವಾ ಸಕ್ರಮಾತಿ ಪಡೆದಿರುತ್ತಾರೆ. ಆದ್ದರಿಂದ ಸದರಿಯವರು ದಿನಾಂಕ:1.4.2006 ಕ್ಕೂ ಪೂರ್ವದಲ್ಲಿ ಚಾಲ್ತಿಯಿದ್ದ ಪಿಂಚಣಿ/ನಿವೃತ್ತ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದು ಕಂಡು ಬಂದಿರುವುದರಿಂದ ಸದರಿಯವರುಗಳ ಸೇವಾ ವಿವರಗಳನ್ನು ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:15.3.2017 ರ ಆದೇಶಕ್ಕೆ ಸೇರ್ಪಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ. ಆದ್ದರಿಂದ ಈ ಆದೇಶ.

**ಆದೇಶ ಸಂಖ್ಯೆ:ಗ್ರಾಅಪ 189 ಸೇಶಿಕಾ 17, ಬೆಂಗಳೂರು, ದಿನಾಂಕ:26.12.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು ಇಲ್ಲಿ ಸಕ್ರಮಗೊಂಡು ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ನೌಕರರ ವಿವರಗಳನ್ನು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 205 ಸೇಶಿಕಾ 2014 (1) ದಿನಾಂಕ:15.3.2017 ರಲ್ಲಿನ ನಿಬಂಧನೆ ಹಾಗೂ ಷರತ್ತಿಗೊಳಪಟ್ಟು ಸದರಿ ಆದೇಶದ ಅನುಬಂಧಿಸಿರುವ ಪಟ್ಟಿಯಲ್ಲಿ ಈ ಕೆಳಕಂಡಂತೆ ಸೇರ್ಪಡೆ ಮಾಡಿ ಆದೇಶಿಸಿದೆ.

| ಜಿಲ್ಲೆಯ ಹೆಸರು | ಒಟ್ಟಾರೆ ಕ್ರ.ಸಂ. | ಕ್ರ.ಸಂ. | ನೌಕರರ ಹೆಸರು | ಸಕ್ರಮಗೊಂಡ ಹುದ್ದೆ | ಪ್ರಸ್ತುತ ಪದನಾಮ | ಪ್ರಸ್ತುತ ವೇತನ ಶ್ರೇಣಿ |
|---|---|---|---|---|---|---|
| ಬೆಂಗಳೂರು ಗ್ರಾಮಾಂತರ | 467 | | ರಾಮಕೃಷ್ಣಯ್ಯ | ದ್ವಿ.ದ.ಸ | ದ್ವಿ.ದ.ಸ | |
| ತುಮಕೂರು | 468 | | ಎಂ.ಆರ್.ಪ್ರಕಾಶ್ | ದ್ವಿ.ದ.ಸ | ದ್ವಿ.ದ.ಸ | |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

26/12/2018
(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು,(ಎ ಮತ್ತು ಇ,) ಬೆಂಗಳೂರು.

2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಂಗಳೂರು ಗ್ರಾಮಾಂತರ/ತುಮಕೂರು.
4. ಸಂಬಂಧಿಸಿದ ನೌಕರರಿಗೆ (ಸಂಬಂಧಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ).
5. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರು,
6. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು.
7. ಗ್ರಾ.ಅ.ಪಂ.ರಾಜ್ ಇಲಾಖೆಯ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು.
8. ಶಾಖಾ ರಕ್ಷಾ ಕಡತ, ಹೆಚ್ಚುವರಿ ಪ್ರತಿ, ಕಂಪ್ಯೂಟರ್ ಸೆಲ್